ಬಡಿತ್ತೈತೋ ಇಲ್ಲೊ? ಆ ಗಿಡದ ಕಡೀಂದ ಗಾಳಿ ಬಂದ್ರೆ ಸಾಕು, ಮನಸ್ಸು ಎಷ್ಟು ಚೆಂದ ಅರಳ್ತದ. ಚಿಂತಿ ದೂರ ಹೋಗ್ತದ. ಊರಾಗ ನಮ್ಮ ಹೊಲದಾಗ ಕಾಡಸಂಪಿಗಿ ಗಿಡ ಇತ್ತು. ಆರಾಮ ಇಲ್ಲದಾಗ, ಮೈಕೈ ನೋವಾದಾಗ ಅದರ ಎಲೆ, ಹೂವು ನೆನೆಸಿ ನಮ್ಮ ಅಪ್ಪಅವ್ವ ಹಚ್ಚತಿದ್ರು. ಮನಿ ಮುಂದ ಈ ಗಿಡ ಇರೋದು ಒಳ್ಳೇದಂತ ಎಲ್ಲಾರೂ ಹೇಳ್ತಾರ. ಅಂತಹದರಾಗ ನೀವು ಬರೇ ಕೆಟ್ಟದ್ದೆ ವಿಚಾರ ಮಾಡ್ತೀರಿ. ನಿಮಗ ಗೊತ್ತಿಲ್ಲಂದ್ರ ದುಂಡಪ್ಪಕಾಕಾನ್ನ ಕೇಳ್ರಿ.'

'ಪ್ರತಿಯೊಂದಕ್ಕೂ ಕಾಕಾನ ತಗೊಂಡು ಬರ್ತಿ ನೋಡು. ಆಂವ ನಿನ್ನ ಮದುವಿ ಮಾಡಿಸ್ಯಾನಂತ ನಮ್ಮ ಇಡೀ ಜನ್ಮ ಇರೋತನಕ ಆಂವ ಹೇಳಿದಂಗ ಕೇಳಬೇಕೇನು?'

'ಕಾಕಾನ ಮಾತು ಬಿಡ್ರೆಪಾ. ಹೂಂ. ನೆನಪಾತು ನೋಡ್ರಿ, ಈ ಮರ ಇದ್ರೆ ಒಳ್ಳೇದು ಅಂತ ಮೊನ್ನೆ ಕುರ್ರಕುರ್ರಮಾಮ ಬಂದಿದ್ದನಲ್ಲ, ಅಂವ ಹೇಳಿಹೋಗ್ಯಾನ. ಈ ಕುರ್ರಮಾಮಾಗಳು ಹೇಳೋ ಮಾತುಗಳು ಖರೇ ಅಕ್ಕಾವು.'

'ಹಾಂ, ಕುರ್ರಮಾಮಾ ಬಂದಿದ್ನಾ. ನನಗೆ ಗೊತ್ತೇ ಇಲ್ಲ. ನಮ್ಮ ಅವ್ವಾಗ ಸೈತ ಕುರ್ರಮಾಮಾ ಕೊಂಡಮಾಮಾಗಳು ಮತ್ತು ಗಿಣಿಶಾಸ್ತ್ರ ಹೇಳಾವ್ರು ಅಂದ್ರ ಬಾಳ ವಿಶ್ವಾಸ. ಅವರ ಬಗ್ಗೆ ಆಕಿ ಮೊದಲಿಂದನೂ ಬಾಳ ನಡಕೋತ ಬಂದಾಳ.'

'ಹೂಂ. ಗೊತ್ತೈತಿ. ಅತ್ತೀದು ಅವರ ಮ್ಯಾಲ ಬಾಳ ವಿಶ್ವಾಸ. ಶಾಸ್ತ್ರ ಶಕುನ ಹೇಳಾವ್ರು ಅಂದ ಆಕೀ ಜೀಂವ ಬಿಡತಾಳ. ಆಕಿ ಇಲ್ಲಿ ಮಲ್ಲೂರಿಗೆ ಇದ್ದಾಗ ಸೈತ ಒಂದು ಸಲ ಕುರ್ರಮಾಮಾ ಬಂದಿದ್ನಲ್ಲ. ಅಂವಗೂ ಆಕಿ ಐವತ್ತೊಂದು ರೂಪಾಯಿ ಕೊಟ್ಟುಕಳಿಸಿದ್ಲು. ಅಂವಗಂತೂ ಬಾಳ ಖುಷಿ ಆಗಿತ್ತು. ನಮ್ಮ ಭವಿಷ್ಯ ಕೇಳೋದಷ್ಟೆ ಅಲ್ಲ, ಅವರ ಇತಿಹಾಸ ಕೇಳ್ಕೋತ ಕುಂತಿದ್ಲು ನಿಮ್ಮವ್ವ. ಅವರ ಉಡುಪುತೊಡುಪು ಕಣ್ಣಾಗ ಕಣ್ಣಿಟ್ಟು ನೋಡಿದ್ಲು ಕಾಣ್ತದ. ಆಂವ ತನ್ನ ಇತಿಹಾಸ ಹೇಳಿ ಹೋದ. ಅವರಿಗಿಂತ ಈಕೀಗೆ ಜಾಸ್ತಿ ಗೊತ್ತೈತಿ ಅನ್ನೂವಂಗ ಹೇಳಾಕಿ. ಹೊರಗ ಕಟ್ಟೆಮ್ಯಾಲ ಕುತಗೊಂಡು ತನ್ನ ವಾರಿಗಿ ಮುದುಕಿಯರಿಗೆ ಹೇಳಿದ್ದೇ ಹೇಳಿದ್ದು. ಅವರ ಕಾವಿಬಟ್ಟೆ, ಹಿಂದಕ್ಕೆ ಬಾಚಿ ಕಟ್ಟಿದ ಕೂದಲು, ಉದ್ದ ಗಡ್ಡ ಮೀಸಿ, ಕೈಗೆ ಹಾಕ್ಕೊಂಡಂಥ ಎಕ್ಕದ ಬೇರಿನ ಬಳಿ, ಕೈಯಾಗಿನ ಏಕತಾರಿಗೆ ಸಿಗಿಸಿದಂಥ ನವಿಲಗರಿ, ಕಿಂವಿಗೆ ಮುಡಿಸಿದ ಚಂದ್ರನಮುರಿ, ಕವಡಿಯಿಂದ ಮಾಡಿದ ನಡಪಟ್ಟಿ. ಒಂದಾ? ಎರಡಾ? ಯವ್ವಾ! ಅತ್ತೀಗಿ ಅಷ್ಟೆಲ್ಲ ಹೆಂಗ ನೆನಪಿತ್ತು ಅಂತೇನಿ?

ಕುರ್ರಮಾಮಾಗ ಮನಿಮದ್ದು ಬಗ್ಗೆನೂ ಗೊತ್ತಿತ್ತು ಕಾಣ್ತದ. ಜ್ವರಾ ಬಂದ್ರ ಏನ್ ಔಷಧಿ ಹಾಕಬೇಕು, ಮೂಲವ್ಯಾಧಿಗೆ ಏನು ಪರಿಹಾರ ಅಂತ ಹೇಳ್ತಾ ಇದ್ದ. ಆದರೆ ಮೊನ್ನೆ ಬಂದಾವ ಅಷ್ಟು ಶಾಣ್ಯಾ ಇರಲಿಲ್ಲ ಬಿಡ್ರಿ. ಅವನು ಹೇಳಿದ್ದು ಒಂದೇ ಒಂದು ನೆನಪಿನ್ಯಾಗ ಉಳೀತು. ನಿನ್ನ ಗಂಡಗ ಭೂಮಿ ಋಣ ಐತೆವಾ ಅಂತ ಅಂದಿದ್ದ. ಅಂವ ಹೇಳಿಹೋದ ಎರಡು ತಿಂಗಳದಾಗ ನಾವು ದುಂಡಪ್ಪಕಾಕಾನ ಬಾಜೂ ಎರಡು ಎಕರೆ ಹೊಲ ಹಿಡಿದೀವಿ. ನೋಡ್ರಿ, ಅಂವ ಹೇಳಿದ್ದು ಖರೆ ಆತು.'

ದೇವಣ್ಣ ನಗುತ್ತ ಅಂದ. 'ಕುರ್ರಮಾಮಾ ಅರ್ಧ ತಾಸು ಹಿಂದುಗಡೆ ಆ ಹೊಲ ಮಾರಾಂವನ

